# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೃಷ್ಣ ಕಣಿವೆಯ ಸ್ಕೀಂ 'ಎ' ಯೋಜನೆಗಳನ್ನು 2011-12 ರೊಳಗೆ ಪೂರ್ಣಗೊಳಿಸಲು ತಾಂತ್ರಿಕ ಪರಿಣಿತರನ್ನು ಆಯೋಜಿಸುವ ಕುರಿತು.

*******

13249
18 DEC 2010
ಬೆಂಗಳೂರು 560 001

**ಪ್ರಸ್ತಾವನೆ:**

ಕೃಷ್ಣಾ ಕಣಿವೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯದ ಸ್ಕೀಂ 'ಎ' ಯೋಜನೆಗಳನ್ನು 2011-12ನೇ ಸಾಲಿನೊಳಗೆ ಪೂರ್ಣಗೊಳಿಸುವುದಾಗಿ ಕೃಷ್ಣಾ ನ್ಯಾಯಾಧಿಕರಣದ ಮುಂದೆ ಕರ್ನಾಟಕ ರಾಜ್ಯವು ತನ್ನ ನಿಲುವನ್ನು ಮಂಡಿಸಲಾಗಿರುವುದರಿಂದ, ನಿಗದಿತ ಅವಧಿಯೊಳಗೆ ಈ ಯೋಜನೆಗಳನ್ನು ಪೂರ್ಣಗೊಳಿಸಲು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಮತ್ತು ಕರ್ನಾಟಕ ನೀರಾವರಿ ನಿಗಮ ನಿಯಮಿತದ ತಾಂತ್ರಿಕ ಉಪ ಸಮಿತಿಯ ತಾಂತ್ರಿಕ ಸದಸ್ಯರ/ತಜ್ಞರ ಸೇವೆಯನ್ನು ಬಳಸಿಕೊಳ್ಳಲು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

## ಸರ್ಕಾರದ ಆದೇಶ ಸಂಖ್ಯೆ: ಜಸಂಇ 243 ವಿಬ್ಯಾಇ 2010, ಬೆಂಗಳೂರು, ದಿನಾಂಕ: 14-12-2010.

ಕೃಷ್ಣಾ ಕಣಿವೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯದ ಸ್ಕೀಂ 'ಎ' ಯೋಜನೆಗಳನ್ನು 2011-12ನೇ ಸಾಲಿನೊಳಗೆ ಪೂರ್ಣಗೊಳಿಸಲು ಉದ್ದೇಶಿಸಿ, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಮತ್ತು ಕರ್ನಾಟಕ ನೀರಾವರಿ ನಿಗಮ ನಿಯಮಿತದ ತಾಂತ್ರಿಕ ಉಪ ಸಮಿತಿಯ ತಾಂತ್ರಿಕ ಸದಸ್ಯರ/ತಜ್ಞರಿಗೆ ಅವರ ಹೆಸರಿನ ಮುಂದೆ ಯೋಜನಾವಾರು ಉಸ್ತುವಾರಿ ಜವಬ್ದಾರಿಯನ್ನು ಅನುಬಂಧದಲ್ಲಿ ತೋರಿಸಿರುವಂತೆ ವಹಿಸಲಾಗಿದೆ. ಈ ತಾಂತ್ರಿಕ ಸದಸ್ಯರು/ತಜ್ಞರು 15 ದಿನಗಳಿಗೊಮ್ಮೆ ಯೋಜನಾ ಸ್ಥಳಕ್ಕೆ ಭೇಟಿ ನೀಡಿ ಯೋಜನೆಯನ್ನು ಪರಿಶೀಲಿಸಿ ಸಕಾಲದಲ್ಲಿ ಕೈಗೊಳ್ಳಬೇಕಾಗಿರುವ ಸೂಕ್ತ ಕ್ರಮಗಳ ಕುರಿತು ಸಲಹೆ ಮತ್ತು ತಾಂತ್ರಿಕ ಅಡಚಣೆಗಳನ್ನು ನಿವಾರಿಸಲು ಮಾರ್ಗೋಪಾಯಗಳನ್ನು ಒಳಗೊಂಡ ವರದಿಯನ್ನು ನೇರವಾಗಿ ಮಾನ್ಯ ಜಲ ಸಂಪನ್ಮೂಲ ಸಚಿವರಿಗೆ ಸಲ್ಲಿಸುವಂತೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಕೆ. ಸಂಪತ್‌ಕುಮಾರ್)
ವಿಶೇಷಾಧಿಕಾರಿ (ತಾಂತ್ರಿಕ-4),
ಜಲ ಸಂಪನ್ಮೂಲ ಇಲಾಖೆ.

ಇವರಿಗೆ,

1. ಮಹಾ ಲೇಖಪಾಲರು (ಲೆಕ್ಕಪತ್ರ/ಲೆಕ್ಕ ಪರಿಶೋದನೆ), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾಫಿ ಬೋರ್ಡ್ ಕಟ್ಟಡ, ಬೆಂಗಳೂರು
3. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಕಾಫಿ ಬೋರ್ಡ್ ಕಟ್ಟಡ, ಬೆಂಗಳೂರು

...2...

4. ಸಂಬಂಧಿಸಿದ ತಾಂತ್ರಿಕ ಸಮಿತಿಯ ಸದಸ್ಯರಿಗೆ ಸಂಬಂಧಿಸಿದ ನಿಗಮದ ಮೂಲಕ ವಿತರಿಸಲು ಕೋರಿದೆ
5. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
6. ವಿಶೇಷಾಧಿಕಾರಿ ಮತ್ತು ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ, ಆರ್ಥಿಕ ಕೋಶ, ಲೋಕೋಪಯೋಗಿ ಇಲಾಖೆ, ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿ (ಕೃಭಾ.ಜ.ನಿ.,), ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಪತ್ರಾಂಕಿತ ಆಪ್ತ ಸಹಾಯಕರು, ಜಲ ಸಂಪನ್ಮೂಲ ಇಲಾಖೆ ವಿಕಾಸ ಸೌಧ, ಬೆಂಗಳೂರು
9. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು
10. ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿ.

*******

## ಸರ್ಕಾರದ ಆದೇಶ ಸಂಖ್ಯೆ: ಜಸಂಇ 243 ವಿಬ್ಯಾಇ 2010, ದಿನಾಂಕ:14–12–2010ಕ್ಕೆ

### ಅನುಬಂಧ

| ಕ್ರಮ ಸಂಖ್ಯೆ | ತಾಂತ್ರಿಕ ಸದಸ್ಯರ ಹೆಸರು ಮತ್ತು ವಿಳಾಸ | ಯೋಜನೆಯ ಹೆಸರು | |
|---|---|---|---|
| 1. | ಶ್ರೀ ಎಸ್.ಎಸ್.ಮಗದಾಳ್,<br>ನಿವೃತ್ತ ಮುಖ್ಯ ಇಂಜಿನಿಯರ್,<br>ಖಾಯಂ ಆಹ್ವಾನಿತರು,<br>ತಾಂತ್ರಿಕ ಉಪ ಸಮಿತಿ,<br>ಕೃಷ್ಣಾ ಭಾಗ್ಯ ಜಲ ನಿಗಮ,<br>ಬೆಂಗಳೂರು. | 1. | ರಾಮಥಾಲ್ ಏತ ನೀರಾವರಿ ಯೋಜನೆ, |
| | | 2. | ತಿಮ್ಮಾಪುರ ಏತ ನೀರಾವರಿ ಯೋಜನೆ |
| | | 3. | ತೆಗ್ಗಿ ಸಿದ್ದಾಪುರ ಏತ ನೀರಾವರಿ ಯೋಜನೆ, |
| | | 4. | ಸೊನ್ತಿ ಏತ ನೀರಾವರಿ ಯೋಜನೆ |
| | ಶ್ರೀ ಜೆ.ಆರ್.ಕೆ.ಕರಡಿ,<br>ನಿವೃತ್ತ ಪ್ರಧಾನ ಇಂಜಿನಿಯರ್,<br>ಸದಸ್ಯರು,<br>ತಾಂತ್ರಿಕ ಉಪ ಸಮಿತಿ,<br>ಕರ್ನಾಟಕ ನೀರಾವರಿ ನಿಗಮ<br>ನಿಯಮಿತ, ಬೆಂಗಳೂರು. | 1. | ಘಟಪ್ರಭಾ ಹಂತ–3 |
| | | 2. | ಹಿಪ್ಪರಗಿ |
| | | 3. | ಬಳ್ಳಾರಿ ನಾಲಾ |
| 3. | ಶ್ರೀ ಆರ್.ಬಸವನಗೌಡ,<br>ನಿವೃತ್ತ ಮುಖ್ಯ ಇಂಜಿನಿಯರ್,<br>ಸದಸ್ಯರು,<br>ತಾಂತ್ರಿಕ ಉಪ ಸಮಿತಿ,<br>ಕರ್ನಾಟಕ ನೀರಾವರಿ ನಿಗಮ<br>ನಿಯಮಿತ, ಬೆಂಗಳೂರು. | 1. | ತುಂಗಾ ಮೇಲ್ದಂಡೆ ಯೋಜನೆ |
| | | 2. | ಗುಡ್ಡದ ಮಲ್ಲಾಪುರ ಏತ ನೀರಾವರಿ ಯೋಜನೆ, |
| | | 3. | ಬಸಾಪುರ ಏತ ನೀರಾವರಿ ಯೋಜನೆ |
| | | 4. | ತಿಳುವಳ್ಳಿ ಏತ ನೀರಾವರಿ ಯೋಜನೆ |
| 4. | ಶ್ರೀ ಎಸ್.ಎಂ.ಛಬ್ಬಿ,<br>ನಿವೃತ್ತ ಮುಖ್ಯ ಇಂಜಿನಿಯರ್,<br>ಸದಸ್ಯರು,<br>ತಾಂತ್ರಿಕ ಉಪ ಸಮಿತಿ,<br>ಕರ್ನಾಟಕ ನೀರಾವರಿ ನಿಗಮ<br>ನಿಯಮಿತ, ಬೆಂಗಳೂರು. | 1. | ಮಲಪ್ರಭಾ |
| | | 2. | ಬೆಣ್ಣೆ ಹಳ್ಳ, ಕೊಳಚಿ ಮತ್ತು ಕೊಣ್ಣೂರು ಏತ ನೀರಾವರಿ ಯೋಜನೆ, |
| | | 3. | ಸಿಂಗಟಾಲೂರು ಏತ ನೀರಾವರಿ ಯೋಜನೆ |
| | | 4. | ಶ್ರೀ ರಾಮೇಶ್ವರ ಏತ ನೀರಾವರಿ ಯೋಜನೆ |
| 5. | ಶ್ರೀ ಎಸ್. ರಾಮದಾಸ್,<br>ನಿವೃತ್ತ ಮುಖ್ಯ ಇಂಜಿನಿಯರ್,<br>ಸದಸ್ಯರು,<br>ತಾಂತ್ರಿಕ ಉಪ ಸಮಿತಿ,<br>ಕೃಷ್ಣಾ ಭಾಗ್ಯ ಜಲ ನಿಗಮ,<br>ಬೆಂಗಳೂರು. | 1. | ಭೀಮಾ ಏತ ನೀರಾವರಿ ಯೋಜನೆ, |
| | | 2. | ಅಮರ್ಜಾ ಏತ ನೀರಾವರಿ ಯೋಜನೆ, |
| | | 3. | ಬೆಣ್ಣೆತೊರಾ |
| | | 4. | ಕಾರಂಜಾ |

(ಹೆಚ್.ಕೆ. ಸಂಪತ್‌ಕುಮಾರ್)
ವಿಶೇಷಾಧಿಕಾರಿ (ತಾಂತ್ರಿಕ–4),
ಜಲ ಸಂಪನ್ಮೂಲ ಇಲಾಖೆ.

14/12/10